# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/3095/2017/ಪಿಪಿ ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 19/11/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ ಬಾಬುರಾವ್ ಬಿ. ಐತ್‌ವಾಡೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೃಷ್ಣಾ-ಕಿತ್ತೂರ ಗ್ರಾಮ ಪಂಚಾಯತ್, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ, (2) ಶ್ರೀ ಕಾಡಪ್ಪ ರಾಮಪ್ಪ ಬಸರಗಿ, ಕ್ಲರ್ಕ್, ಕೃಷ್ಣಕಿತ್ತೂರು, ಅಥಣಿ ತಾ. ಬೆಳಗಾವಿ ಜಿಲ್ಲೆ ಮತ್ತು (3) ಶ್ರೀ ಸುನೀಲ ಅಣ್ಣಪ್ಪ ಲಂಬಿಕಾಯಿ, ಸಿಪಾಯಿ ಕೃಷ್ಣಕಿತ್ತೂರು, ಅಥಣಿ ತಾ. ಬೆಳಗಾವಿ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ಶ್ರೀ ಮಾಣೀಕ ಕಾಡಪ್ಪಾ ಪಾಟೀಲ್, ಕೃಷ್ಣಾ-ಕಿತ್ತೂರ್, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಬಾಬುರಾವ್ ಬಿ. ಐತ್‌ವಾಡೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೃಷ್ಣಾ-ಕಿತ್ತೂರ ಗ್ರಾಮ ಪಂಚಾಯತ್, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ. ಶ್ರೀ ಕಾಡಪ್ಪ ರಾಮಪ್ಪ ಬಸರಗಿ, ಕ್ಲರ್ಕ್, ಗ್ರಾಮ ಪಂಚಾಯತ್ ಕೃಷ್ಣ-ಕಿತ್ತೂರು, ಅಥಣಿ ತಾ. ಬೆಳಗಾವಿ ಜಿಲ್ಲೆ ಮತ್ತು ಶ್ರೀ ಸುನೀಲ ಅಣ್ಣಪ್ಪ ಲಂಬಿಕಾಯಿ, ಗ್ರಾಮ ಪಂಚಾಯತ್ ಸಿಪಾಯಿ ಕೃಷ್ಣಕಿತ್ತೂರು, ಅಥಣಿ ತಾ. ಬೆಳಗಾವಿ ಜಿಲ್ಲೆ (ಇನ್ನು

ಮುಂದೆ '2 ಮತ್ತು 3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ತನಿಖಾ ಕಾಲದಲ್ಲಿ ಸೇರಿಸಿಕೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ಸಾರಾಂಶ: ಪಿರ್ಯಾದುದಾರರು ಸ್ವಂತ ಮನೆ ಹೊಂದಿದ್ದು, ಆಸ್ತಿ ನಂ. 385/1 ಇದರ ವಾರ್ಷಿಕ ಪಾಳ ಪಾವತಿ, ನೀರಿನ ಕರ ತುಂಬುತ್ತಾ ಬರುತ್ತಿರುತ್ತಾರೆ. ಎದುರುದಾರರು ಕರ ಪಾವತಿಸಿಲ್ಲ ಎಂದು ಹೇಳುತ್ತಿದ್ದಾರೆ. ಆಸ್ತಿ ನಂ. 409ಕ್ಕೆ ಸಂಬಂಧಪಟ್ಟ ಖಾಲಿ ಜಾಗದ ಕರವನ್ನು ಒಂದೇ ವರ್ಷದಲ್ಲಿ ಎರಡು ಬಾರಿ ಕಟ್ಟಿಸಿಕೊಂಡಿರುತ್ತಾರೆ. ಪಿರ್ಯಾದುದಾರರು ದಿನಾಂಕ: 20/07/2015 ರಂದು 31/03/2016 ರವರೆಗಿನ ಬಿಲ್ ರೂ.5,560/- ತುಂಬಿದ್ದು ಈಗ ಮತ್ತೆ 1 ವರ್ಷಕ್ಕೆ ರೂ.10,390/- ಗಳನ್ನು ತುಂಬಬೇಕೆಂದು ರಸೀದಿ ಮಾಡಿದ್ದಾರೆ. ಪಿರ್ಯಾದುದಾರರು ಈ ರೀತಿ ಇನ್ನೂ ಅನೇಕ ಅವ್ಯವಹಾರ ಮಾಡಿರುತ್ತಾರೆ. ತನಿಖೆ ಕೈಗೊಳ್ಳಲು ಕೋರಿರುತ್ತಾರೆ.

ಪಿರ್ಯಾದುದಾರರ ಸ್ವತ್ತಿಗೆ ಸಂಬಂಧಪಟ್ಟಂತೆ ಕರ ಆಕರಣೆಯಾದ ಮತ್ತು ಕರ ಕಟ್ಟಿದ್ದಕ್ಕೆ ಸಾಮಾನ್ಯ ರಸೀದಿ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಸದರಿ ರಸೀದಿಗಳನ್ನು ಪರಿಶೀಲಿಸಲಾಗಿ 2011-2ನೇ ಸಾಲಿನಲ್ಲಿ, 2015-16ನೇ ಸಾಲಿನಲ್ಲಿ ವಿಧಿಸಿರುವ ಕರವನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. 2017-18ನೇ ಸಾಲಿನ ರಸೀದಿಯಲ್ಲಿ ಹಿಂದೆ ಬಾಕಿ ಎಂದು ತೋರಿಸಿದ್ದು ಹಿಂದಿನ ಕರ ಪಾವತಿಸಿದ್ದರೂ 2017-18 ರಲ್ಲಿ ಬಾಕಿ ಎಂದು ತೋರಿಸಿರುತತಾರೆ ಎಂದು ಆರೋಪಿಸಿರುತ್ತಾರೆ. ಪಿರ್ಯಾದುದಾರರು 2016-17 ರಲ್ಲಿ ಕರ ಪಾವತಿಸಿದ ರಸೀದಿಗಳನ್ನು ಹಾಜರುಪಡಿಸಿರುವುದಿಲ್ಲ.

3. 1ನೇ ಎದುರುದಾರರ ಆಕ್ಷೇಪಣೆ:- ಪಿರ್ಯಾದುದಾರರ ಹೆಸರಿಗೆ ದಾಖಲೆ ಇರುವ ಆಸ್ತಿ ನಂ. 385/1 ನೇದ್ದಕ್ಕೆ ಸಂಬಂಧಿಸಿದಂತೆ ಸನ್ 2017-18ನೇ ಸಾಲಿಗೆ ಸದರಿಯವರಿಂದ ಒಟ್ಟು ರೂ.940/- ಮತ್ತು ನೀರಿನ ಕರ ರೂ.2,400/-

ಪಾವತಿಸುವುದು ಬಾಕಿಯಿತ್ತು. ಆದರೆ ಸದರಿಯವರ ಕರಗಳನ್ನು ಪಾವತಿಸಲು ಬಂದಾಗ ಪಂಚಾಯತಿಯ ಕರ ವಸೂಲಿಗಾರರ ನಜರ ಚೂಕಿಯಿಂದ ರೂ.940/-ರ ಬದಲಾಗಿ ರೂ.3190/- ಅಂದರೆ ರೂ.2,250/- ಹೆಚಿಗೆ ಭರಿಸಿಕೊಂಡು ರಸೀದಿ ನೀಡಲಾಗಿದೆ ಅದರಂತೆ ಕುಡಿಯುವ ನೀರಿನ ಕರಗಳ ಸಂಬಂಧಪಟ್ಟಂತೆ ರೂ.2,400/-ರ ಬದಲಾಗಿ ರೂ.7,200/- ಭರಿಸಿಕೊಂಡು ರಸೀದಿಯನ್ನು ನೀಡಲಾಗಿದೆ. ಇದರಲ್ಲಿ ರೂ.4,800/- ಹೆಚ್ಚಿಗೆ ಭರಿಸಿಕೊಳ್ಳಲಾಗಿದೆ. ಒಟ್ಟಾರೆಯಾಗಿ ರೂ.7,050/- ಗಳನ್ನು ಹೆಚ್ಚುವರಿಯಾಗಿ ನಜರ ಚೂಕಿಯಿಂದ ಭರಿಸಿಕೊಳ್ಳಲಾಗಿದೆ. ಅರ್ಜಿದಾರರು ಬಯಸಿದ್ದಲ್ಲಿ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಮುಂಬರುವ ಆರ್ಥಿಕ ವರ್ಷದ ಕರಗಳಲ್ಲಿ ಹೊಂದಾಣಿಕೆ ಮಾಡಿಕೊಡುತ್ತೇವೆ ಎಂದು ನಮೂದಿಸಿರುತ್ತಾರೆ.

4. ಎದುರುದಾರರ ಆಕ್ಷೇಪಣೆಗಳಿಂದ ಪಿರ್ಯಾದುದಾರರ ಸ್ವತ್ತಿಗೆ ಸಂಬಂಧಪಟ್ಟಂತೆ ಕರ ವಸೂಲಿಗಾರರು ಒಟ್ಟು ರೂ.7,050/- ಗಳನ್ನು ಹೆಚ್ಚುವರಿಯಾಗಿ ಕರ ವಸೂಲಿ ಮಾಡಿದ್ದಾಗಿ ನಮೂದಿಸಿರುತ್ತಾರೆ. ಲಗತ್ತಿಸಿರುವ ಎರಡು ಕರ ಸಂಗ್ರಹಣ ರಸೀದಿಗಳಲ್ಲಿ ಇಬ್ಬರು ಕರ ವಸೂಲಿಗಾರರ (ಶ್ರೀ ಕಾಡಪ್ಪ ರಾಮಪ್ಪ ಬಸರಗಿ ಕ್ಲರ್ಕ ಹಾಗೂ ಶ್ರೀ ಸುನೀಲ ಅಣ್ಣಪ್ಪ ಲಿಂಬಿಕಾಯಿ, ಅಥಣಿ ತಾ. ಬೆಳಗಾವಿ ಜಿಲ್ಲೆ) ಸಹಿಗಳಿರುವುದು ಕಂಡು ಬರುತ್ತದೆ. ಆದ್ದರಿಂದ, ಸದರಿ ಇಬ್ಬರನ್ನು 2 ಮತ್ತು 3ನೇ ಎದುರುದಾರರೆಂದು ಸೇರ್ಪಡಿಸಿ ಅವರಿಂದ ಆಕ್ಷೇಪಣೆ ಕರೆಯಲಾಗಿರುತ್ತದೆ.

5. 2ನೇ ಎದುರುದಾರರು ಮತ್ತು 3ನೇ ಎದುರುದಾರರ ಆಕ್ಷೇಪಣೆಗಳು:- ಪಿರ್ಯಾದುದಾರರು ದಿನಾಂಕ 31.08.2017 ರಂದು ನಮ್ಮ ಗ್ರಾಮ ಪಂಚಾಯತ್ ಕಾರ್ಯಾಲಯಕ್ಕೆ ಖುದ್ದಾಗಿ ಬಂದು ಮೌಖಿಕವಾಗಿ ಅವರ

ಕುಟುಂಬದ ಆಸ್ತಿ ನಂ. 385/1 ಮತ್ತು 409 ಈ ಎರಡು ಆಸ್ತಿಗಳಿಗೆ ಸಂಬಂಧಿಸಿದಂತೆ, ಚಾಲ್ತಿ ವರ್ಷದ ಜೊತೆಗೆ 1 ವರ್ಷದ ಕರಗಳನ್ನು ಮುಂಗಡವಾಗಿ ಭರಿಸಿಕೊಳ್ಳೂವಂತೆ ತಿಳಿಸದ ಪ್ರಕಾರ 1 ವರ್ಷದ ಕರಗಳನ್ನು ಮುಂಗಡವಾಗಿ ಭರಿಸಿಕೊಂಡು ಅಧಿಕೃತವಾಗಿ ರಸಿದಿಯನ್ನು ನೀಡಲಾಗಿದೆ ಮತ್ತು ಇದರಲ್ಲಿ ಯಾವುದೇ ದುರುದ್ದೇಶ ಇರುವುದಿಲ್ಲ ಸದ್ರಿಯವರ ಅತ್ತಿಗೆಯಾದ ಸೌ.ಅಕ್ಕಾತಾಯಿ ಶಿವಪ್ಪಾ ಪಾಟೀಲ ಇವರು ಸದರಿಅವಧಿಯಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದುದರಿಂದ ಅವವರವರ ಒಳ ಜಗಳಕ್ಕೆ ಪಂಚಾಯತಿಯನ್ನು ವಿನಾಕಾರಣ ದೂರುತ್ತಿದ್ದಾರೆ. ಪಿರ್ಯಾದುದಾರರು ನೀಡಿರುವ ಮೊತ್ತಕ್ಕೆ ಅಧಿಕೃತವಾಗಿ ರಸಿದಿಯನ್ನು ನೀಡಿ ಅವರು ಭರಿಸಿದ ಮೊತ್ತವನ್ನು ಪಂಚಾಯತ ಖಾತೆಗೆ ಭರಣಾ ಮಾಡಲಾಗಿದೆ ಎಂದು ನಮೂದಿಸಿರುತ್ತಾರೆ.

6. ಸದರಿ ಪ್ರಕರಣದಲ್ಲಿ ಫಿರ್ಯಾದಿದಾರರ ಫಿರ್ಯಾದಿ, ಹಾಗೂ ಎದುರುದಾರರ ಆಕ್ಷೇಪಣೆಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 1ನೇ ಎದುರುದಾರರು ಕಣ್ಣು ತಪ್ಪಿನಿಂದ ಹೆಚ್ಚುವರಿ ಕರವನ್ನು ಸಂಗ್ರಹಿಸಲಾಗಿರುತ್ತದೆ ಅರ್ಜಿದಾರರು ಬಯಸಿದ್ದಲ್ಲಿ ಹೆಚ್ಚುವರಿ ಮೊತ್ತವನ್ನು ಮುಂಬರುವ ಆರ್ಥಿಕ ವರ್ಷದ ಕರಗಳಲ್ಲಿ ಹೊಂದಾಣಿಕೆ ಮಾಡಿಕೊಡುತ್ತೇವೆ ಮುಂದೆ ಈ ತರಹದ ಘಟನೆ ನಡೆಯದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುತ್ತೇವೆ, ಎಂದು ಕೇಳಿಕೊಂಡಿರುತ್ತಾರೆ.

7. 2ನೇ ಮತ್ತು 3ನೇ ಎದುರುದಾರರು ದಿ. 31.8.2017ರಂದು ಗ್ರಾ.ಪಂ. ಕಾರ್ಯಾಲಯಕ್ಕೆ ಫಿರ್ಯಾದಿದಾರರ ಖುದ್ದಾಗಿ ಬಂದು ತಮ್ಮ ಆಸ್ತಿ ಣ. 385/1 ಮತ್ತು 409 ಈ ಎರಡು ಆಸ್ತಿಗಳಿಗೆ ಸಂಬಂಧಿಸಿದಂತೆ, ಚಾಲ್ತಿ ವರ್ಷದ

ಜೊತೆಗೆ 1 ವರ್ಷದ ಮುಂಗಡ ಕರವನ್ನು ಭರಿಸಿಕೊಂಡು ಅಧಿಕೃತ ರಶೀದಿಯನ್ನು ನೀಡಲಾಗಿದೆ, ಯಾವುದೇ ದುರುದ್ದೇಶ ಇರುವುದಿಲ್ಲ ಆ ಸಮಯದಲ್ಲಿ ಫಿರ್ಯಾದಿದಾರರ ಅತ್ತಿಗೆಯಾದ ಅಕ್ಕಾತಾಯಿ ಶಿವಪ್ಪಾ ಪಾಟೀಲ ಇವರು ಗ್ರಾ.ಪಂ., ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರಿಂದ ಅವರ ಒಳಜಗಳಕ್ಕೆ ಪಂಚಾಯತಿಯನ್ನು ವಿನಾಕಾರಣ ದೂರಿದ್ದಾರೆ ಎಂದು ಹೇಳಿ, ನಾನು ನೀಡಿದ ಹಣವನ್ನು ಪಡೆದು ಅದಕ್ಕೆ ಅಧಿಕೃತ ರಶೀದಿಯನ್ನು ನೀಡಿದ್ದನ್ನು ಫಿರ್ಯಾದಿದಾರರು ಒಪ್ಪಿದ್ದು ನನ್ನ ವಿರುದ್ಧ ಪ್ರಕರಣ ಕೈಬಿಡಬೇಕೆಂದು ಕೋರಿರುತ್ತಾರೆ. 1 ರಿಂದ 3ನೇ ಎದುರುದಾರರ ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ತಮ್ಮನ್ನು ಪ್ರಕರಣದಿಂದ ಕೈಬಿಡುವಂತೆ ಕೋರಿದ್ದು ಆದರೆ ತಪ್ಪಾದ ಅಂಶಗಳನ್ನು ಎದುರುದಾರರು ಒಪ್ಪಿರುವುದರಿಂದ ಅವರ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ.

8. ಸದರಿ ಎಲ್ಲಾ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ಮತ್ತು ಈ ಅಂಶಗಳಿಗೆ ಫಿರ್ಯಾದಿದಾರ ಪ್ರತ್ಯುತ್ತರ ಗಮನಿಸಿದಾಗ ಹಣದ ದುರ್ಬಳಕೆಯಾಗಿರುವುದು ಕಂಡುಬರುವುದಿಲ್ಲ. ಆದರೆ ಮುಂಗಡವಾಗಿ ಹಣವನ್ನು ಕಟ್ಟಿಸಿಕೊಂಡಿರುವುದು ಕಂಡುಬರುತ್ತದೆ. ಮುಂಗಡವಾಗಿ ಹಣವನ್ನು ಕಟ್ಟಿಸಿಕೊಂಡ ಸಂಬಂಧ ರಶೀದಿಯನ್ನು ನೀಡದೆ ಹೋಗಿದ್ದಲ್ಲಿ ಎದುರುದಾರರು ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆಂದು ಖಾತ್ರಿ ಮಾಡಿಕೊಳ್ಳಬಹುದಾಗಿತ್ತು. ಆದರೆ ಅಧಿಕೃತ ರಶೀದಿ ನೀಡಿರುವುದಾಗಿ, ಫಿರ್ಯಾದಿಯೇ ರಶೀದಿಯನ್ನು ಹಾಜರುಪಡಿಸಿರುವುದರಿಂದ ಮತ್ತು 1ನೇ ಎದುರುದಾರರು ಕಣ್ಣು ತಪ್ಪಿನಿಂದ ಮುಂಗಡ ಹಣವನ್ನು ಪಡೆದಯಲಾಗಿದೆ ಎಂದು ಮತ್ತು ತಪ್ಪನ್ನು ಕ್ಷಮಿಸುವಂತೆ ಮತ್ತು ಈ ರೀತಿಯ ತಪ್ಪುಗಳಿಗೆ ಆಸ್ಪದ ನೀಡುವುದಿಲ್ಲ ಎಂದು ಹೇಳಿರುವುದರಿಂದ, ಎದುರುದಾರರು ತಪ್ಪು ಮಾಡಿರುವುದು ಕಂಡುಬರುತ್ತದೆ.

ಆದರೆ ಅಧಿಕೃತ ರಶೀದಿಗಳನ್ನು ಹಾಕಿರುವುದರಿಂದ, ಅವ್ಯವಹಾರ ನಡೆಯದೆ ಇರುವುದು ಕಂಡುಬರುತ್ತದೆ. ಆದರೆ 1 ರಿಂದ 3ನೇ ಎದುರುದಾರರು ಫಿರ್ಯಾದಿದಾರರು ಈ ಸಂಸ್ಥೆಗೆ ಅರ್ಜಿ ಕೊಡುವ ಪೂರ್ವದಲ್ಲಿ ಎದುರುದಾರರಿಗೆ ಅನೇಕ ಬಾರಿ ಕೇಳಿದರು ಸಹಾ ಎದುರುದಾರನು ಕ್ರಮ ಕೈಗೊಳ್ಳದೇ ದೂರುದಾರರಿಗೆ ಅನಾವಶ್ಯಕವಾಗಿ ತಿರುಗಾಡುವಂತೆ ಮಾಡಿದ್ದಲ್ಲದೇ ಸೂಕ್ತಮಾಹಿತಿ ಯನ್ನು ನೀಡದೇ ಅಧಿಕಾರದ ದರ್ಪದಿಂದ ಸಮಂಜಸ ಉತ್ತರ ನೀಡದೇ ದೂರುದಾರನು ಈ ಸಂಸ್ಥೆಗೆ ಅರ್ಜಿ ಸಲ್ಲಿಸುವವರೆಗೂ ಯಾವುದೇ ಕ್ರಮ ಜರುಗಿಸದೇ ಹೋಗಿರುವುದರಿಂದ, ಅಧಿಕಾರ ದುರುಪಯೋಗ ಮತ್ತು ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ತೋರಿರುವುದು ದೃಢಪಡುತ್ತದೆ.

9. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರ- (1) ಶ್ರೀ ಬಾಬುರಾವ್ ಬಿ. ಐತ್‌ವಾಡೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೃಷ್ಣಾ-ಕಿತ್ತೂರ ಗ್ರಾಮ ಪಂಚಾಯತ್, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ, (2) ಶ್ರೀ ಕಾಡಪ್ಪ ರಾಮಪ್ಪ ಬಸರಗಿ, ಕ್ಲರ್ಕ್, ಗ್ರಾಮ ಪಂಚಾಯತ್ ಕೃಷ್ಣಕಿತ್ತೂರು, ಅಥಣಿ ತಾ. ಬೆಳಗಾವಿ ಜಿಲ್ಲೆ ಮತ್ತು (3) ಶ್ರೀ ಸುನೀಲ ಅಣ್ಣಪ್ಪ ಲಂಬಿಕಾಯಿ, ಸಿಪಾಯಿ ಗ್ರಾಮ ಪಂಚಾಯತ್ ಕೃಷ್ಣಕಿತ್ತೂರು, ಅಥಣಿ ತಾ. ಬೆಳಗಾವಿ ಜಿಲ್ಲೆ ರವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ

ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

N. Anand 15/11

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**